**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಾ. ಎಂ .ಜಿ ಮುಳೆ ಇವರ ನಿಯಮ 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ**

ಪ್ರಸ್ತಾಪ:

ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಗೆ ಸಾಕಷ್ಟು ಅನುದಾನ ನೀಡದೇ ಇರುವುದರಿಂದ ಶರಣರ ಸ್ಮಾರಕಗಳ ನಿರ್ವಹಣೆ ಆಗದೆ ಮಂಡಳಿ ಸ್ಥಾಪನೆಯ ಉದ್ದೇಶವೆ ನಿರರ್ಥಕವಾಗಿ ಸಾರ್ವಜನಿಕರಿಗೆ ಹಾಗೂ ಪ್ರವಾಸಿಗರಿಗೆ ಮೂಲಸೌಕರ್ಯಗಳ ಕೊರತೆಯಾಗಿ ನಿರಾಶೆಯಾಗುತ್ತಿರುವುದರಿಂದ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ

ಉತ್ತರ:

ಬಸವಕಲ್ಯಾಣ ಅಭಿವೃದ್ಧಿ ಮಂಡಳಿಗೆ ಕಳೆದ 05 ವರ್ಷಗಳಲ್ಲಿ ಕ್ರಮವಾಗಿ 2019-20 ನೇ ಸಾಲಿನಲ್ಲಿ ರೂ.75.00 ಲಕ್ಷಗಳನ್ನು, 2020-21 ನೇ ಸಾಲಿನಲ್ಲಿ ರೂ.150.00 ಲಕ್ಷಗಳನ್ನು, 2021-22 ನೇ ಸಾಲಿನಲ್ಲಿ ರೂ.200.00 ಲಕ್ಷಗಳನ್ನು, 2022-23ನೇ ಸಾಲಿನಲ್ಲಿ ರೂ.150.00 ಲಕ್ಷಗಳನ್ನು, 2023-24ನೇ ಸಾಲಿನಲ್ಲಿ ರೂ.50.00 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯವರಿಗೆ ಬಿಡುಗಡೆಗೊಳಿಸಲಾಗಿರುವ ಅನುದಾನದಿಂದ ಪ್ರತಿ ವರ್ಷವು ಆಡಳಿತಾತ್ಮಕ ವೆಚ್ಚ, ಬಸವ ತತ್ವ ಪ್ರಸಾರ ಕಾರ್ಯಕ್ರಮಗಳು ಮತ್ತು ಶರಣ ಸಾಹಿತ್ಯ ಕಾರ್ಯಕ್ರಮಗಳು ಹಾಗೂ ಸದರಿ ಮಂಡಳಿಗೆ ಸಂಬಂದಿಸಿದ ಒಟ್ಟು 29 ಪರಂಪರೆಯ ತಾಣ ಮತ್ತು ಸ್ಮಾರಕಗಳಾದ 1) ಕೋಟೆ 2) ಪರುಷಕಟ್ಟೆ 3) ಬಸವೇಶ್ವರಗುಡಿ 4) ಕಿನ್ನರಿ ಬೊಮ್ಮಯ್ಯನ ಗವಿ 5) ಮೋಳಿಗೆಯ ಮಾರಯ್ಯನ ಗುಡಿ 6) ದೇವರ ದಾಸಿಮಯ್ಯ / ಜೇಡರ ದಾಸಿಮಯ್ಯ 7) ಕಂಬಳಿ ಮಠ 8) ಬಸವ ಭವನ 9) ಸದಾನಂದ ಮಠ 10) ಹರಳಯ್ಯನ ಗವಿ ಮತ್ತು ಗುಡಿ 11) ಬಸವ ವನ 12) ಜಾತ್ರೆ ಮೈದಾನ 13) ಪ್ರಭುದೇವರ ಗದ್ದಿಗೆ 14) ಮಡಿವಾಳ ಮಾಚಯ್ಯನ ಗದ್ದಿಗೆ 15) ಶಿವಪುರ ಗುಡಿ 16) ನಾರಾಯಣಪುರ ಗುಡಿ 17) ಅಕ್ಕನಾಗಮ್ಮನ ಗವಿ 18) ಬಸವೇಶ್ವರರು ಇದ್ದ ಸ್ಥಳ ಅರಿವಿನ ಗವಿ 19) ತ್ರಿಪೂರಾಂತಕೇಶ್ವರ ಗುಡಿ 20) ಧರ್ಮಶಾಲೆ 21) ತ್ರಿಪೂರಾಂತಕ ಹಳ್ಳಿಯ ಪವಿತ್ರ ಸ್ಥಳಗಳು 22) ತ್ರಿಪೂರಾಂತಕ ಕೆರೆ 23) ರುದ್ರಮುನಿ ಮತ್ತು ವಿಜ್ಞಾನೇಶ್ವರ ಗವಿಗಳು 24) ನೂತನ ಅನುಭವ ಮಂಟಪ 25) ಪಂಚಸೂತ್ರ ಗವಿ 26) ನೂಲಿಯ ಚಂದಯ್ಯನ ಗವಿ 27) ಬಾಂದವರ ಓಣಿ 28) ಯಳಹೋಟೆ ಸ್ಥಳ ಹಾಗೂ 29) ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯಗಳ ಹಾಗೂ ಶರಣರ ಸ್ಮಾರಕಗಳ ನಿರ್ವಹಣೆ ಮಾಡಲಾಗುತ್ತಿದೆ.

ಸಂಖ್ಯೆ: ಕಂಇ 196 ಆರ್ ಬಿಎ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು